# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 340 |
| ಸದಸ್ಯರ ಹೆಸರು | ಶ್ರೀ. ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 23.09.2020 |
| ಉತ್ತರಿಸುವ ಸಚಿವರು | ಕೃಷಿ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ನಕಲಿ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳು ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೆಲವು ಜಿಲ್ಲೆಗಳಲ್ಲಿ ಬಿಡಿ ಬಿತ್ತನೆ ಬೀಜಗಳು,ನಕಲಿ ರಸಗೊಬ್ಬರಗಳು, ಕೀಟನಾಶಕಗಳು ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ | ಬಂದಿದ್ದಲ್ಲಿ, ಸರ್ಕಾರರೈತರಹಿತಕ್ಕಾಗಿ ಕೈಗೊಂಡಿರುವ ಕ್ರಮಗಳೇನು? | ಕೃಷಿ ಇಲಾಖೆಯ ಅಧಿಕಾರಿಗಳು, ಜಾಗೃತ ದಳ ರವರು ರಾಜ್ಯದ ವಿವಿಧ ಮಾರಾಟ ಮಳಿಗೆಗಳ ತಪಾಸಣೆ ಕೈಗೊಂಡು ಅನಧಿಕೃತವಾಗಿ ನಕಲಿ ಕೃಷಿ ಪರಿಕರಗಳನ್ನು ಮಾರಾಟ ಮಾಡುತ್ತಿರುವವರನ್ನು ಪತ್ತೆ ಹಚ್ಚಿ ಸುಮಾರು 149 ಪರವಾನಗಿಗಳನ್ನು ಅಮಾನತ್ತುಗೊಳಿಸಿ ಕ್ರಮ ಕೈಗೊಳ್ಳಲಾಗಿದೆ ಹಾಗೂ ರಾಜ್ಯದ ವಿವಿಧ ಶೀಥಿಲೀಕರಣ ಘಟಕಗಳಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿರುವ ಸುಮಾರು 8080.68 ಕ್ವಿಂಟಾಲ್ ಮೆಕ್ಕೆಜೋಳ ಹಾಗೂ ಸೂರ್ಯಕಾಂತಿ ಬೀಜಗಳನ್ನು(Loose Seeds) ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ. ಹಾಗೂ ವಿವರ ಅನುಬಂಧ-1 ರಲ್ಲಿನೀಡಲಾಗಿದೆ.<br>ನಕಲಿ ರಸಗೊಬ್ಬರ ಮಾರಾಟ ಪ್ರಕರಣಗಳ ವಿವರ ಅನುಬಂಧ-2 ರಲ್ಲಿ ನೀಡಲಾಗಿದೆ.<br>ರೈತರಿಗೆ ಗುಣಮಟ್ಟದ ಬಿತ್ತನೆ ಬೀಜಗಳು,ರಸಗೊಬ್ಬರಗಳು, ಕೀಟನಾಶಕಗಳ ಸರಬರಾಜು ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರ ರೂಪಿಸಿರುವ ಬೀಜ ಅಧಿನಿಯಮ-1966, ಬೀಜ ನಿಯಮಾವಳಿ-1968 ಮತ್ತುಬೀಜ (ನಿಯಂತ್ರಣ) ಆದೇಶ-1983ನ್ನು, ರಸಗೊಬ್ಬರ ನಿಯಂತ್ರಣ ಆದೇಶ, 1985 ರನ್ವಯ ಹಾಗೂ ಕೀಟನಾಶಕ ಕಾಯ್ದೆ1968 ಮತ್ತು ಕೀಟನಾಶಕ ನಿಯಮ 1971 ರನ್ವಯ ಕೃಷಿ ಇಲಾಖೆಯ ಎಲ್ಲಾ ಹಂತದಲ್ಲಿ ಅಧಿಸೂಚಿಸಲಾಗಿರುವ ಪರಿವೀಕ್ಷಕರುಗಳು ಮಾರಾಟ ಮಳಿಗೆಗಳಿಂದ ಕೃಷಿ ಪರಿಕರಗಳ ಮಾದರಿ ಸಂಗ್ರಹಿಸಿ ಇಲಾಖೆಯ ಅಧಿಸೂಚಿತ ಪರೀಕ್ಷಾಪ್ರಯೋಗಾಲಯಗಳಲ್ಲಿ ವಿಶ್ಲೇಷಣೆಗಾಗಿ ಕಳುಹಿಸಿ ಪರೀಕ್ಷೆಯಲ್ಲಿ ಮಾದರಿಗಳು ಕಡಿಮೆ ಗುಣಮಟ್ಟದ್ದೆಂದು ಕಂಡುಬಂದಲ್ಲಿ ಅಂತಹ ಮಾರಾಟಗಾರರ ವಿರುದ್ಧ ಅಧಿನಿಯಮದಡಿ ಕ್ರಮಜರುಗಿಸಲಾಗುತ್ತಿದೆ ಹಾಗೂ ಪ್ರತಿ ಜಿಲ್ಲೆಯಲ್ಲಿಯೂ ಸಹಾಯಕ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ವಿಜಿಲೆನ್ಸ್ ತಂಡಗಳನ್ನು ರಚಿಸಲಾಗಿದ್ದು, ತಂಡದ ಸದಸ್ಯರು ಮಾರಾಟ ಮಳಿಗೆಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಕಾನೂನು ಕ್ರಮ ಜರುಗಿಸಿರುತ್ತಾರೆ. |

**ಸಂಖ್ಯೆ: AGRI-ACT/163/ 2020**

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

## ಅನುಬಂಧ-1

### ಕೃಷಿ ಇಲಾಖೆಯ ಅಧಿಕಾರಿಗಳು, ಜಾಗೃತ ದಳ ( ಕೃಷಿ) ರವರು ರಾಜ್ಯದ ವಿವಿಧ ಶೀಥಿಲೀಕರಣ ಘಟಕಗಳಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿರುವ ಮೆಕ್ಕೆಜೋಳ ಹಾಗೂ ಸೂರ್ಯಕಾಂತಿ ಬೀಜಗಳನ್ನು (Loose seeds) ವಶಕ್ಕೆ ಪಡೆದು ಪ್ರಕರಣ ದಾಖಲಿಸಿರುವ ಕುರಿತು

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ದಿನಾಂಕ | ವಶ ಪಡಿಸಿಕೊಂಡ ಸ್ಥಳ | ವಶ ಪಡಿಸಿಕೊಂಡ ಬಿತ್ತನೆ ಬೀಜ | ಪ್ರಮಾಣ | ಮೌಲ್ಯ | ಕ್ರಮ |
|---|---|---|---|---|---|---|---|---|
| 1 | ಹಾವೇರಿ | ಹಿರೆಕೇರೂರು | 22.04.2020 | ಶೀರಗುಂಬಿ ಗ್ರಾಮದ ಶ್ರೀ ಸುರೇಶ್ ಗೌಡ್ರು ರವರ ಗೋದಾಮು | ಮೆಕ್ಕೆಜೋಳ | ಸುಮಾರು 35 ಕ್ವಿಂಟಾಲ್ | ರೂ 525000/- | ಪೊಲೀಸ್ ಮೊಕ್ಕದ್ದಮೆ ದಾಖಲಿಸಲಾಗಿದೆ ಹಾಗೂ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಅಗತ್ಯ ವಸ್ತುಗಳ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. |
| 2 | ಬಳ್ಳಾರಿ | ಹಡಗಲಿ | 22.04.2020 | ಹಿರೇಹಡಗಲಿ ಹೋಬಳಿಯ ಲಿಂಗನಾಯಕನಹಳ್ಳಿ ಗ್ರಾಮದಲ್ಲಿ ಶ್ರೀ ಬಸವಣ್ಣಪ್ಪ ಜವಳಮ್ಮನವರ್ ತಂದೆ ಮಲಕಪ್ಪ ಇವರ ಮಾಲಿಕತ್ವದ ಗೋದಾಮು | ಮೆಕ್ಕೆಜೋಳ ಬೀಜ | 31.20 ಕ್ವಿಂಟಾಲ್ | ರೂ 468000/- | ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ಅಗತ್ಯ ವಸ್ತುಗಳ ಕಾಯಿದೆಯಡಿಯಲ್ಲಿ ಹಾಗೂ ಬೀಜ ನಿಯಂತ್ರಣ ಕಾಯಿದೆ 1983 ರರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. |
| 3 | ಹಾವೇರಿ | ಬ್ಯಾಡಗಿ | 24.04.2020 | ಬ್ಯಾಡಗಿ ತಾಲ್ಲೂಕಿನ ಸೂರ್ಯ ಕೋಲ್ಡ್ ಸ್ಟೋರೇಜ್ | ಮೆಕ್ಕೆಜೋಳ ಬೀಜ | 2745 ಕ್ವಿಂಟಾಲ್ | ರೂ 4,11,75,000 /- | ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಅಗತ್ಯ ವಸ್ತುಗಳ ಕಾಯಿದೆಯಡಿಯಲ್ಲಿ ಹಾಗೂ ಬೀಜ ನಿಯಂತ್ರಣ ಕಾಯಿದೆ 1983 ರರ ಅಡಿಯಲ್ಲಿ FIR ದಾಖಲಿಸಲಾಗಿದೆ. FIR ಸಂ 0044/2020 ಆಗಿ |
| 4 | ಹಾವೇರಿ | ಬ್ಯಾಡಗಿ | 24.04.2020 | ಬ್ಯಾಡಗಿ ತಾಲ್ಲೂಕಿನ ವಕ್ರತುಂಡ ಕೋಲ್ಡ್ ಸ್ಟೋರೇಜ್ | ಮೆಕ್ಕೆಜೋಳ ಬೀಜ<br>ಸೂರ್ಯಕಾಂತಿ | 2621 ಕ್ವಿಂಟಾಲ್<br>288.4 ಕ್ವಿಂಟಾಲ್ | ಮೌಲ್ಯ 3,93,145,00 /- ರೂಗಳಾಗಿದೆ | ಈ ಕುರಿತು ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಅಗ ವಸ್ತುಗಳ ಕಾಯ್ದೆಯಡಿಯಲ್ಲಿ ಹಾಗೂ ಬೀಜ ನಿಯಂತ್ರಣ ಕಾಯಿದೆ 1983 ರರ ಅಡಿಯಲ್ಲಿ F ದಾಖಲಿಸಲಾಗಿದೆ. FIR ಸಂ 0045/2020 ಆ |
| 5 | ಧಾರವಾಡ | ಹುಬ್ಬಳ್ಳಿ | 24-04-2020 | ಹುಬ್ಬಳ್ಳಿಯ ಅಮರಗೋಳ | ಮೆಕ್ಕೆಜೋಳ | 270.60 | 40,59,000/- | ಪೊಲೀಸ್ ಠಾಣೆಯಲ್ಲಿ ಅಗತ್ಯ ವಸ್ತುಗಳ |

| | | | | | | | | |
|---|---|---|---|---|---|---|---|---|
| | | | | ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿರುವ ಮಹಮ್ಮದ್ ಸಲೀಂ ಬ್ಯಾಹಟ್ಟಿ ಹಾಗು ಜಗಮೋಹನ್ ರಾವ್ ಮಾಲೀಕತ್ವದ ಶ್ರೀ ವಿಜಯಾ ಕೋಲ್ಡ್ ಸ್ಟೋರೇಜ್ | ಬೀಜ | ಕ್ವಿಂಟಾಲ್ | ರೂಗಳಾಗಿದೆ | ಕಾಯ್ದೆಯಡಿಯಲ್ಲಿ ಹಾಗೂ ಬೀಜ ನಿಯಂತ್ರಣ ಕಾಯಿದೆ 1983 ರರ ಅಡಿಯಲ್ಲಿ FIR ದಾಖಲಿಸಲಾಗಿದೆ. FIR ಸಂ 0045/2020 ಆಗಿದೆ. |
| 6 | ಹಾವೇರಿ | ಬ್ಯಾಡಗಿ | 24-04-2020 | ನವಲಿ ಪುಂಡಲೀಕಪ್ಪ ಕೋಲ್ಡ್ ಸ್ಟೋರೇಜ್ | ಮೆಕ್ಕೆಜೋಳ ಬೀಜ | 1484 ಕ್ವಿಂಟಾಲ್ | ಮೌಲ್ಯ 2,22,60,000 /- ರೂಗಳಾಗಿದೆ | ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಅಗತ್ಯ ವಸ್ತುಗಳ ಕಾಯ್ದೆಯಡಿಯಲ್ಲಿ ಹಾಗೂ ಬೀಜ ನಿಯಂತ್ರಣ ಕಾಯಿದೆ 1983 ರರ ಅಡಿಯಲ್ಲಿ FIR ದಾಖಲಿಸಲಾಗಿದೆ. FIR ಸಂ 0045/2020 ಆಗಿದೆ. |
| 7 | ಹಾವೇರಿ | ಬ್ಯಾಡಗಿ | 26-04-2020 | ಶ್ರೀ ಗುರು ಸಿದ್ಧಗಂಗಾ ಕೋಲ್ಡ್ ಸ್ಟೋರೇಜ್ | ಮೆಕ್ಕೆಜೋಳ ಬೀಜ | 270.6 ಕ್ವಿಂಟಾಲ್ | 27.06 ಲಕ್ಷಗಳಾಗಿದೆ | ಅಗತ್ಯ ವಸ್ತುಗಳ ಕಾಯ್ದೆಯಡಿಯಲ್ಲಿ ಹಾಗೂ ಬೀಜ ನಿಯಂತ್ರಣ ಕಾಯಿದೆ 1983 ರರ ಅಡಿಯಲ್ಲಿ FIR ದಾಖಲಿಸಲಾಗಿದೆ. FIR ಸಂ 0048/2020 ಆಗಿದೆ. |
| 8 | ಬಳ್ಳಾರಿ | ಬಳ್ಳಾರಿ | 26.4.2020 | ಮುಂಡರಗಿ ಗ್ರಾಮದ ಕೋಲ್ಡ್ ಸ್ಟೋರೇಜ್ | ಮೆಕ್ಕೆಜೋಳ ಲೂಸ್ ಬೀಜ | 300 ಕ್ವಿಂಟಾಲ್ | ಮೌಲ್ಯ 30.00 ಲಕ್ಷಗಳಾಗಿದೆ. | ಪೊಲೀಸ್ ಠಾಣೆಯಲ್ಲಿ ಅಗತ್ಯ ವಸ್ತುಗಳ ಕಾಯಿದೆ ಅಡಿಯಲ್ಲಿ ಹಾಗೂ ಬೀಜ ನಿಯಂತ್ರಣ ಕಾಯಿದೆ 1983 ರರ ಅಡಿಯಲ್ಲಿ FIR ದಾಖಲಿಸಲಾಗಿದೆ. FIR ಸಂ 0123/2020 ಆಗಿದೆ. |
| 9 | ಹಾವೇರಿ | ಹಾವೇರಿ | 26.4.2020 | ಗುತ್ತಲಾ ಕಾಂಚನಗಂಗಾ ಸೀಡ್ಸ್ ಗೋಡಾನ್ | ಮೆಕ್ಕೆಜೋಳ ಲೂಸ್ ಬೀಜಗಳನ್ನು | 280 ಕ್ವಿಂಟಾಲ್ | 30.00 ಲಕ್ಷಗಳಾಗಿದೆ | ಪೊಲೀಸ್ ಠಾಣೆಯಲ್ಲಿ ಅಗತ್ಯ ವಸ್ತುಗಳ ಕಾಯಿದೆ ಅಡಿಯಲ್ಲಿ ಹಾಗು ಬೀಜ ನಿಯಂತ್ರಣ ಕಾಯಿದೆ 1983 ರರ ಅಡಿಯಲ್ಲಿ FIR ದಾಖಲಿಸಲಾಗಿದೆ. FIR ಸಂ 0061/2020 ಆಗಿದೆ. |

| | | | | | | | | |
|---|---|---|---|---|---|---|---|---|
| 10 | ಯಾದಗಿರಿ | ಯಾದಗಿರಿ | 1.06.2020 | ನರ್ಮದಾ ಸಾಗರ್ ಸೀಡ್ಸ್ | ಬಿ.ಟಿ.ಹತ್ತಿ ನಕಲಿ ಬೀಜಗಳು | 34.595 ಕ್ವಿಂಟಾಲ್ | 250.00 ಲಕ್ಷಗಳಾಗಿದೆ. | ಪೊಲೀಸ್ ಠಾಣೆಯಲ್ಲಿ ಅಗತ್ಯ ವಸ್ತುಗಳ ಕಾಯಿದೆ ಅಡಿಯಲ್ಲಿ ಹಾಗೂ ಬೀಜ ನಿಯಂತ್ರಣ ಕಾಯಿದೆ 1983 ರರ ಅಡಿಯಲ್ಲಿ FIR ದಾಖಲಿಸಲಾಗಿದೆ. FIR ಸಂ 0070/2020 ಆಗಿದೆ. |

ಒಟ್ಟಾರೆ ಬೀಜೋಪಚಾರ ಮಾಡಿ ಅನಧೀಕೃತವಾಗಿ ದಾಸ್ತಾನು ಮಾಡಿದ್ದ ಸುಮಾರು 8080.68 ಕ್ವಿಂಟಲ್ ಲೂಸ್ ಬೀಜಗಳನ್ನು ವಶಪಡಿಸಿಕೊಳ್ಳಲಾಗಿದ್ದು ಇದರ ಒಟ್ಟು ಅಂದಾಜು ಮೌಲ್ಯ ರೂ.14.15 ಕೋಟಿ ರೂಪಾಯಿಗಳಾಗಿರುತ್ತದೆ.

## ಅನುಬಂಧ-2

## ಜಿಲ್ಲೆಗಳಿಂದ ವರದಿಯಾಗಿರುವ ನಕಲಿ ರಸಗೊಬ್ಬರ ಮಾರಾಟ ಪ್ರಕರಣಗಳ ವಿವರ

| ಕ್ರ.ಸಂ | ಜಿಲ್ಲೆ | ವಿವರಗಳು |
|---|---|---|
| 1 | ಧಾರವಾಡ | ಕಿಸಾನ್ ಅಗ್ರೋ ಇಂಡಸ್ಟ್ರೀಸ್ ಗೋಕುಲ್ ಇಂಡಸ್ಟ್ರಿಯಲ್ ಏರಿಯಾ ಹುಬ್ಬಳ್ಳಿಯಲ್ಲಿ 7.50 ಕ್ವಿಂಟಲ್ ನಪ್ಪು 17:17:17 ರಸಗೊಬ್ಬರ ವಶಪಡಿಸಿಕೊಂಡಿದ್ದು ಇದರ ಮೌಲ್ಯ ರೂ. 13500-00 ಹಾಗೂ ತಯಾರಿಕಾ ಘಟಕದ ಪರವಾನಿಗೆಯನ್ನು ಅಮಾನತ್ತು ಗೊಳಿಸಲಾಗಿದೆ. |
| 2 | ಯಾದಗಿರಿ | ಶಹಾಪೂರತಾಲ್ಲೂಕಿನ ಭೀ. ಗುಡಿಗ್ರಾಮದ ಹತ್ತಿರ 3.73 ಮೊತ್ತದ ನಕಲಿ ರಸಗೊಬ್ಬರದ 298 ಚೀಲಗಳನ್ನು ಜಪ್ತಿ ಮಾಡಲಾಗಿದೆ. |
| 3 | ಬಾಗಲಕೋಟೆ | ಜಿಲ್ಲೆಯಲ್ಲಿ ನಕಲಿ ಗೊಬ್ಬರ ಮಾರಾಟ ಪ್ರಕರಣ ಕುರಿತು ಅಗತ್ಯ ವಸ್ತುಗಳ ಕಾಯ್ದೆ 1955 (U/S-7,3): IPC 1860(U/S-420) ಅಡಿ<br>ಎ. ಸಹಾಯಕ ಕೃಷಿ ನಿರ್ದೇಶಕರು, ಬಾಗಲಕೋಟೆ ಇವರಿಂದ ನವನಗರ ಪೋಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ -0062/2020 ದಿ:14.05.2020.<br>ಬಿ. ಸಹಾಯಕ ಕೃಷಿ ನಿರ್ದೇಶಕರು, ಮುಧೋಳ್ ಇವರಿಂದ ನವನಗರ ಪೋಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ -0076/2020 ದಿ:14.05.2020.ರಂತೆ ಪ್ರಕರಣ ದಾಖಲಿಸಲಾಗಿದೆ. |
| 4 | ವಿಜಯಪುರ | ನಕಲಿ ರಸಗೊಬ್ಬರ 2 ಲಾರಿಗಳನ್ನು ಪರಿವೀಕ್ಷಕರು ವಳಪಡಿಸಿಕೊಂಡು ನ್ಯಾಯಾಲಯದಲ್ಲಿ ಮೊಕದ್ದಮ್ಮೆ ದಾಖಲಿಸಲಾಗಿದೆ. |